# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY, RESEARCH AND REFERENCE BRANCH

## ಪತ್ರಿಕಾ ತುಣುಕುಗಳು 4
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: BBMP

ಪತ್ರಿಕೆಯ ಹೆಸರು : NAME OF THE NEWS PAPER: [illegible] ದಿನಾಂಕ : DATE : 6/11/20

### 2 ವರ್ಷಕ್ಕೆ ಸೀಮಿತಗೊಳಿಸಲು ಒತ್ತಾಯ

# ಮೇಯರ್ ಅವಧಿ ವಿಸ್ತರಣೆಗೆ ಆಕ್ಷೇಪ

ಪ್ರಜಾವಾಣಿ ವಾರ್ತೆ 6-11-20

ಬೆಂಗಳೂರು: ಮೇಯರ್ ಅಧಿಕಾರದ ಅವಧಿಯನ್ನು 5 ವರ್ಷಗಳಿಗೆ ಏರಿಕೆ ಮಾಡಬೇಕೆಂಬ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ-2020 ಮಸೂದೆಯ ಪ್ರಸ್ತಾವಕ್ಕೆ ಪಾಲಿಕೆಯ ಮಾಜಿ ಸದಸ್ಯರಿಂದಲೇ ಆಕ್ಷೇಪ ವ್ಯಕ್ತವಾಗಿದೆ. ಅದೇ ರೀತಿ, ಚುನಾವಣೆಯ ಮೂಲಕ ಮೇಯರ್ ಆಯ್ಕೆ ಮಾಡುವ ಬದಲು, ಸದ್ಯ ಇರುವ ವಿಧಾನವನ್ನೇ ಪಾಲಿಸಬೇಕೆಂಬ ಅಭಿಪ್ರಾಯ ವ್ಯಕ್ತವಾಗಿದೆ.

'ಜನಾಗ್ರಹ' ಸಂಘಟನೆಯು ನಗರದಲ್ಲಿ ಗುರುವಾರ ಆಯೋಜಿಸಿದ್ದ ಸಿಟಿ ಪಾಲಿಟಿಕ್ಸ್ ವೆಬಿನಾರ್‌ನಲ್ಲಿ ವಿವಿಧ ಪಕ್ಷಗಳ ಪಾಲಿಕೆಯ ಮಾಜಿ ಸದಸ್ಯರು ಹಾಗೂ ಮುಖಂಡರು ಮಾತನಾಡಿದರು.

**'ಪಾಲಿಕೆ ಸದಸ್ಯರಿಗೆ ಅಧಿಕಾರ ನೀಡಲಿ'**



'1.03 ಕೋಟಿ ಜನಸಂಖ್ಯೆ ಇರುವ ನಗರಕ್ಕೆ ಹೊಸ ಕಾಯ್ದೆ ತರುತ್ತಿರುವುದು ಸ್ವಾಗತಾರ್ಹ. ಮಸೂದೆಯ ಸಾಧಕ-ಬಾಧಕಗಳ ಬಗ್ಗೆ ಹೆಚ್ಚಿನ ಚರ್ಚೆಗಳು ನಡೆಯಬೇಕಿದೆ. ವಲಯ ಸಮಿತಿಗಳಲ್ಲಿ ಅಧಿಕಾರಿಗಳ ಬದಲು ಚುನಾಯಿತ ಪ್ರತಿನಿಧಿಗಳಿಗೆ ಪ್ರಾತಿನಿಧ್ಯ ನೀಡಬೇಕು. ಮೇಯರ್ ಜತೆಗೆ ಪಾಲಿಕೆ ಸದಸ್ಯರಿಗೆ ಕೂಡ ಹೆಚ್ಚಿನ ಅಧಿಕಾರ ಇರಬೇಕು. ಮೇಯರ್‌ಗೆ ಮಾತ್ರ ಹೆಚ್ಚಿನ ಅಧಿಕಾರ ನೀಡಿದಲ್ಲಿ ಕೌನ್ಸಿಲ್ ಸಭೆ ಮಹತ್ವ ಕಳೆದುಕೊಳ್ಳುವ ಸಾಧ್ಯತೆ ಇರುತ್ತದೆ. ಮೇಯರ್ ಅಧಿಕಾರದ ಅವಧಿಯನ್ನು 2 ವರ್ಷಕ್ಕೆ ಹೆಚ್ಚಿಸುವುದು ಉತ್ತಮ. ಚುನಾವಣೆ ಮೂಲಕ ಮೇಯರ್ ಆಯ್ಕೆ ಸರಿಯಾದ ಕ್ರಮವಲ್ಲ'.

**ಪದ್ಮನಾಭ ರೆಡ್ಡಿ,** ಪಾಲಿಕೆಯ ಮಾಜಿ ಸದಸ್ಯ (ಬಿಜೆಪಿ)

**'ಚುನಾವಣೆ ಮುಂದೂಡುವ ತಂತ್ರ'**

'ನಗರಕ್ಕೆ ಅಗತ್ಯವಾಗಿ ಪ್ರತ್ಯೇಕವಾದ ಕಾಯ್ದೆ ಬೇಕು. ಆದರೆ, ಅದನ್ನು ಸರಿಯಾದ ಸಮಯದಲ್ಲಿ ಪರಿಚಯಿಸುತ್ತಿಲ್ಲ. ಮಸೂದೆ ಮಂಡಿಸಿ ಚುನಾವಣೆ ಮುಂದೂಡಲು ಷಡ್ಯಂತ್ರ ನಡೆಸಲಾಗಿದೆ. ಈ ಮಸೂದೆಯ ಬಗ್ಗೆ ಸರ್ಕಾರೇತರ ಸಂಸ್ಥೆಗಳು, ಪಾಲಿಕೆಯ ಮಾಜಿ ಸದಸ್ಯರು, ತಜ್ಞರು ಹಾಗೂ ಹಿರಿಯ ನಾಗರಿಕರ ಸಲಹೆಗಳನ್ನು ಪಡೆಯಬೇಕಿದೆ. ಸಮಗ್ರ ಬೆಂಗಳೂರಿನ ಅಭಿವೃದ್ಧಿಯ ದೃಷ್ಟಿಯಿಂದ ಕಾಯ್ದೆಯು ದೂರದೃಷ್ಟಿ ಹೊಂದಿರಬೇಕು. ಮೇಯರ್ ಅಧಿಕಾರದ ಅವಧಿಯನ್ನು 5 ವರ್ಷಕ್ಕೆ ವಿಸ್ತರಿಸುವುದು ಸರಿಯಲ್ಲ. ಬೆಸ್ಕಾಂ, ಜಲಮಂಡಳಿ ಸೇರಿದಂತೆ ವಿವಿಧ ಸಂಸ್ಥೆಗಳು ಒಟ್ಟಾಗಿ ಸಾಗುವ ವ್ಯವಸ್ಥೆ ರೂಪಿಸಬೇಕು. ಪಾಲಿಕೆ ಸದಸ್ಯರಿಗೆ ಹೆಚ್ಚಿನ ಅಧಿಕಾರ ನೀಡಬೇಕು'.

**ಅಬ್ದುಲ್ ವಾಜಿದ್,** ಪಾಲಿಕೆ ಮಾಜಿ ಸದಸ್ಯ (ಕಾಂಗ್ರೆಸ್)

**'ಸಾರ್ವಜನಿಕ ಚರ್ಚೆ ನಡೆಯಬೇಕು'**

'ಚುನಾವಣೆಯನ್ನು ಮುಂದೂಡುವ ಉದ್ದೇಶದಿಂದಲೇ ಈ ಸಂದರ್ಭದಲ್ಲಿ ಮಸೂದೆಯನ್ನು ತರಲಾಗಿದೆ. ಈ ಹಿಂದೆಯೇ ಅಥವಾ ಚುನಾವಣೆ ಮುಗಿದ ಬಳಿಕ ಮಸೂದೆಯನ್ನು ಪರಿಚಯಿಸಬಹುದಾಗಿತ್ತು. ಈ ಸಂದರ್ಭದಲ್ಲಿ ತರುತ್ತಿರುವುದು ಸರಿಯಾದ ಕ್ರಮವಲ್ಲ. ಇದರಲ್ಲಿ ಕಾಮಗಾರಿಗಳನ್ನು ಯಾವ ರೀತಿ ಕೈಗೊಳ್ಳಬೇಕು ಎಂಬ ಸ್ಪಷ್ಟನೆಯಿಲ್ಲ. ಹಾಗಾಗಿ ಇದರ ಬಗ್ಗೆ ವಿವಿಧ ಹಂದರಗಳಲ್ಲಿ ಚರ್ಚೆಗಳು ನಡೆಯಬೇಕಿದೆ. ನಗರಕ್ಕೆ ಪ್ರತ್ಯೇಕ ಕಾಯ್ದೆಯ ಅಗತ್ಯವಿದ್ದು, ಅದು ಸಮಗ್ರ ಅಭಿವೃದ್ಧಿಗೆ ಪೂರಕವಾಗಿರಬೇಕು. ಬಿಬಿಎಂಪಿಯಲ್ಲಿ ಹಣ ಪೋಲು ಆಗುವುದನ್ನು ಕೂಡ ತಡೆಯಬೇಕಿದೆ'.

**ಆರ್. ಪ್ರಕಾಶ್,** ಜೆಡಿಎಸ್ ಬೆಂಗಳೂರು ನಗರ ಘಟಕದ ಅಧ್ಯಕ್ಷ

**'ಚುನಾವಣೆ ಸಮಯದಲ್ಲಿ ನಗರದ ನೆನಪು'**

'ಎಲ್ಲ ಪಕ್ಷಗಳಿಗೂ ಚುನಾವಣೆಯ ಸಮಯದಲ್ಲಿ ಬೆಂಗಳೂರು ನಗರ ನೆನಪಾಗುತ್ತದೆ. ಚುನಾಯಿತ ಪ್ರತಿನಿಧಿಗಳಿಗೆ ಹೆಚ್ಚಿನ ಅಧಿಕಾರ ನೀಡದಿರುವುದು ಸರಿಯಲ್ಲ. ಯೋಜನೆಯ ಬಗ್ಗೆ ಕೂಡ ಪ್ರಸ್ತಾಪಿಸಿಲ್ಲ. ಮೇಯರ್ ಚುನಾವಣೆಯಲ್ಲಿ ಬೇರೆ ಜಿಲ್ಲೆಗಳ ಶಾಸಕರು, ಸಂಸದರಿಗೆ ನೀಡಿರುವ ಮತದಾನದ ಹಕ್ಕನ್ನು ಕೈಬಿಡಬೇಕು. ವಾರ್ಡ್ ಸಮಿತಿಗೆ ಹೆಚ್ಚಿನ ಅಧಿಕಾರ ನೀಡಿರುವುದು ಸ್ವಾಗತಾರ್ಹ. ಮೇಯರ್‌ಗೆ 5 ವರ್ಷ ಅಧಿಕಾರದ ಅವಧಿ ನೀಡಬೇಕು. ನೇರ ಚುನಾವಣೆಯ ಮೂಲಕ ಮೇಯರ್ ಆಯ್ಕೆಯಾಗುವ ವ್ಯವಸ್ಥೆ ಬರಬೇಕು'.

**ಸಿ.ಎನ್. ದೀಪಕ್,** ಕರ್ನಾಟಕ ರಾಷ್ಟ್ರ ಸಮಿತಿಯ ಪ್ರಧಾನ ಕಾರ್ಯದರ್ಶಿ

**'ಎಲ್ಲ ನಗರಗಳಿಗೂ ಅನ್ವಯ ಆಗಬೇಕು'**

'ಕಾಯ್ದೆಯನ್ನು ಬೆಂಗಳೂರಿಗೆ ಮಾತ್ರ ಸೀಮಿತಗೊಳಿಸುತ್ತಿರುವುದು ಸರಿಯಲ್ಲ. ಎಲ್ಲ ನಗರಗಳಿಗೂ ನೂತನ ಕಾಯ್ದೆ ಅನ್ವಯವಾಗಬೇಕು. ಸಂವಿಧಾನದಲ್ಲಿ ಉತ್ತಮವಾಗಿ ಆಡಳಿತ ನಡೆಸಲು ಎಲ್ಲ ಅವಕಾಶಗಳೂ ಇವೆ. ಹಾಗಾಗಿ ಪ್ರತ್ಯೇಕ ಕಾಯ್ದೆಯ ಅಗತ್ಯ ಇರಲಿಲ್ಲ. ರಾಜ್ಯ ಸರ್ಕಾರವು ಕೋವಿಡ್ ನಿರ್ವಹಣೆಯಲ್ಲಿ ವಿಫಲವಾಗಿದೆ. ಇನ್ನೊಂದೆಡೆ, ಆರ್ಥಿಕ ವ್ಯವಸ್ಥೆ ಕುಸಿಯುತ್ತಿದೆ. ಈ ಕಾರಣಕ್ಕೆ ಬಿಬಿಎಂಪಿ ಚುನಾವಣೆಯನ್ನು ಮುಂದೂಡುವ ಅಸ್ತ್ರವನ್ನಾಗಿ ಬಳಸಿಕೊಳ್ಳಲಾಗುತ್ತಿದೆ. ಮೇಯರ್‌ಗೆ ಸರಿಯಾದ ಅಧಿಕಾರ ಇಲ್ಲದಿದ್ದಲ್ಲಿ ಅಧಿಕಾರದ ಅವಧಿ ಹೆಚ್ಚಳ ನಿರರ್ಥಕವಾಗಲಿದೆ'.

**ಎಂ.ಎಸ್. ಶಾಂತಲಾ ದಾಮ್ಲೆ,** ಆಮ್ ಆದ್ಮಿ ಪಕ್ಷದ ರಾಜ್ಯ ಸಹ ಸಂಚಾಲಕಿ

**'ಮೇಯರ್‌ಗೆ 5 ವರ್ಷ ಅಧಿಕಾರದ ಅವಧಿ ಅಗತ್ಯ'**

'ಮೇಯರ್ ಅಧಿಕಾರದ ಅವಧಿ ಬಗ್ಗೆ ಪ್ರಶ್ನೆಗಳು ಉದ್ಭವಿಸಿದೆ. ಪ್ರಧಾನ ಮಂತ್ರಿ, ಮುಖ್ಯಮಂತ್ರಿಯ ಅಧಿಕಾರದ ಅವಧಿಯನ್ನು ಒಂದು ವರ್ಷಕ್ಕೆ ಇಳಿಕೆ ಮಾಡಿದರೆ ಅದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಮೇಯರ್ ಅಧಿಕಾರದ ಅವಧಿ ಒಂದು ವರ್ಷ ಇರುವ ಕಾರಣಕ್ಕೆ ಬೆಂಗಳೂರು ನಗರ ಇಂತಹ ಹೀನಾಯ ಸ್ಥಿತಿಯನ್ನು ತಲುಪಿದೆ. ಮೇಯರ್ ಅಧಿಕಾರದ ಅವಧಿಯನ್ನು 5 ವರ್ಷಕ್ಕೆ ಹೆಚ್ಚಳ ಮಾಡಬೇಕಿದೆ. ಪಾಲಿಕೆ ಸದಸ್ಯರಿಗೆ ಹೆಚ್ಚಿನ ಅಧಿಕಾರ ನೀಡಬೇಕಿದೆ'.

**ಶ್ರೀಕಾಂತ ನರಸಿಂಹನ್,** ಬೆಂಗಳೂರು ನವ ನಿರ್ಮಾಣ ಪಕ್ಷದ ಪ್ರಧಾನ ಕಾರ್ಯದರ್ಶಿ